# ಜೆನ್–ಜಿ ಜ್ಯುವೆಲರಿ ಝಲಕ್

■ ರೂಪಾ ಕೆ.ಎಂ.

ಜೆನ್–ಜಿ ಜನರೇಷನ್ ಇರುವುದೇ ಹಾಗೆ. ಅದಕ್ಕೆ ಹರಿಯುವ ನೀರಿನ ವಿರುದ್ಧ ದಿಕ್ಕಿಗೆ ಚಲಿಸುವ ಧೈರ್ಯ, ನಿಯಮಗಳನ್ನೆಲ್ಲ ಮುರಿಯುವ ತವಕ. ವ್ಯಕ್ತಿಗತ ಆಸಕ್ತಿಗಳಿಗೆ ಸದಾ ಆದ್ಯತೆ. ಆಭರಣ ಲೋಕದಲ್ಲಿಯೂ ಜೆನ್–ಜಿ ವಿನ್ಯಾಸಗಳು ಹೆಚ್ಚು ಜನಪ್ರಿಯಗೊಳ್ಳುತ್ತಿವೆ.

## ಏನಿದು ಜೆನ್ -ಜಿ ಜ್ಯುವೆಲರಿ?

ಆಭರಣಗಳ ವಿನ್ಯಾಸದ ಮೂಲಕವೇ ಅಭಿವ್ಯಕ್ತಿಗಳನ್ನು ಪ್ರದರ್ಶಿಸುವ, ಸುಸ್ಥಿರತೆಗೆ ಆದ್ಯತೆ ನೀಡುವ, ವ್ಯಕ್ತಿಗತ ಹಕ್ಕುಗಳನ್ನು ಪ್ರತಿಪಾದಿಸುವ ಧೋರಣೆಯ ಹಿನ್ನೆಲೆಯ ಆಭರಣಗಳಿವು. ಆಡಂಬರವಿಲ್ಲದೇ, ಬಣ್ಣ ಬಣ್ಣದ ಚಿತ್ತಾರಗಳಿರುವ ಬೀಡ್ಸ್, ಚಂಕಿ ಎನಿಸುವ ರಿಂಗ್‌ಗಳು, ಪರಿಸರಸ್ನೇಹಿ ಹಾಗೂ ಮರುಬಳಕೆ ಮಾಡಬಹುದಾದ ವಸ್ತುಗಳಿಂದ ಯುವ ಮನಸ್ಸನ್ನು ಕದ್ದಿವೆ. ಹಗುರ ಎನಿಸುವ, ಯಾವಾಗ ಬೇಕಾದರೂ ತೊಡಬಹುದಾದ ಆಭರಣಗಳಿವು. ತೊಟ್ಟವರ ವೈಯಕ್ತಿಕ ಹಿತಾಸಕ್ತಿ, ನಂಬುಗೆಯನ್ನು ಈ ಆಭರಣಗಳನ್ನು ಕಂಡೇ ಅರಿತುಕೊಳ್ಳಬಹುದು.

ಜೆನ್–ಜಿ ಒಟ್ಟು ವ್ಯಕ್ತಿತ್ವವನ್ನು ಬಿಂಬಿಸುವುದರ ದ್ಯೋತಕವಾಗಿ ಬಟ್ಟೆ ಅಥವಾ ಆಭರಣಗಳನ್ನು ತೊಡುತ್ತಾರೆ. ತಮಗೆ ಇಷ್ಟವಾದ ವಸ್ತುಗಳಿಂದ ತಯಾರಾದ ಆಭರಣಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಅದು ಜನ್ಮನಕ್ಷತ್ರಕ್ಕೆ ಹೊಂದುವ ಮುತ್ತುರತ್ನಗಳಿರಬಹುದು ಅಥವಾ ಟೆರ್ರಾಕೋಟಾ ಆಭರಣಗಳೇ ಇರಬಹುದು. ಅದರ ಮೇಲೆ ಇರಬೇಕಾದ ಸೂಕ್ಷ್ಮಕೆತ್ತನೆಯೂ ಜೆನ್–ಜಿ ಮನಸ್ಥಿತಿಗೆ ತಕ್ಕದಾಗಿರುತ್ತದೆ.

ನೆಕ್ಲೇಸ್, ಬಳೆ, ಉಂಗುರ ಯಾವುದೇ ಇರಲಿ ಅದರ ಮೇಲೆ ತಮಗಿಷ್ಟವಾದ ಸಾಲುಗಳು, ಹೆಸರುಗಳು ಅಥವಾ ಹಾಡಿನ ಮೊದಲ ಪದಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿರುತ್ತದೆ. ಹಳೆ ಬಟ್ಟೆ ಧರಿಸಿ, ಇಂಥ 'ಯುನಿಕ್' ಆಭರಣಗಳನ್ನು ತೊಡಲಾಗುತ್ತದೆ. ಇವು ಸರಳ, ಸುಂದರವಾಗಿರುವುದಲ್ಲದೇ, ಆಯ್ಕೆಯ ಹಿಂದೆ ಆಳವಾದ ಅರ್ಥವಿರುತ್ತದೆ.

ಇವುಗಳೆಲ್ಲ ಸರಳವಾಗಿಯೇ ಇರಬೇಕು ಎಂಬ ನಿಯಮವೇನಿಲ್ಲ. ದಪ್ಪನೆಯ ಉಂಗುರಗಳು, ವರ್ಣರಂಜಿತ ಮಣಿಗಳಿರುವ ನೆಕ್ಲೇಸ್‌ಗಳು, ಜಾಲದಂತಿರುವ ನೆಕ್ಲೇಸ್‌ಗಳ ಮೇಲೆ ಮೂರು ನಾಲ್ಕು ಚಿಕ್ಕ ಚಿಕ್ಕ ಪೆಂಡೆಂಟ್‌ಗಳು, ಅವುಗಳ ಮೇಲೆ ಸೂಕ್ಷ್ಮವಾಗಿ ಕೆತ್ತಿರುವ ಅಕ್ಷರಗಳು, ಬಟರ್‌ಫ್ಲೈ ಮೋಟಿಫ್‌ಗಳು, ಫುಕಾ ಶೆಲ್ ನೆಕ್ಲೇಸ್‌ಗಳು ಸದ್ಯಕ್ಕೆ ಟ್ರೆಂಡ್‌ನಲ್ಲಿವೆ. ಜತೆಗೆ ರೆಟ್ರೊ ಪರಿಕಲ್ಪನೆಗೆ ತಕ್ಕುದಾದ ಮೋಟಿಫ್‌ಗಳನ್ನು ಬಳಸಲಾಗುತ್ತದೆ. ಜನಸಂದಣಿಯಲ್ಲಿ ಎದ್ದು ಕಾಣಲು, ಜೀನ್ಸ್ ಮತ್ತು ಆಫ್ ಶೋಲ್ಡರ್ ಧರಿಸಿದಾಗಲೂ ದೊಡ್ಡ ಗಾತ್ರದ ಆಭರಣಗಳನ್ನು ತೊಟ್ಟು ಮಿಂಚಬಹುದು. ದಪ್ಪ ಸರಪಳಿಯಂತೆ ಕಾಣುವ ಸೂಪರ್ ಸೈಜ್‌ನ ಓಲೆಗಳು, ನೆಕ್ಲೇಸ್ ಒಪ್ಪುತ್ತವೆ.



ಜೆನ್–ಜಿ ತಲೆಮಾರಿಗೆ ಚರ್ಮ ಹೊಳೆಯುತ್ತಿರಬೇಕು. ಆ ಹೊಳಪಿಗೆ ಆಭರಣವು ಮೆರುಗು ನೀಡಿದರೆ ಅಲ್ಲೊಂದು 'ಫ್ಯಾಷನ್ ಸ್ಟೇಟ್‌ಮೆಂಟ್' ಸಿದ್ಧಗೊಂಡಂತೆ. ಬಾಲ್ಯದ ನೆನಪುಗಳನ್ನು ಆಭರಣದಲ್ಲಿ ಕೆತ್ತಿಸಿ, ಹಾಕಿಕೊಳ್ಳುವವರಿದ್ದಾರೆ. ತಮ್ಮಿಷ್ಟದ ಮಾವಿನಹಣ್ಣು ಅಥವಾ ಮರ, ಟೆಡ್ಡಿಬೇರ್, ಇಷ್ಟದ ಕಾರ್ಟೂನ್ ಚಿತ್ರಗಳು, ಹೀಗೆ ಮತ್ತೆ ಮತ್ತೆ ಬಾಲ್ಯಕ್ಕೆ ಮರಳುವ ಹುಕಿ ಈ ಆಭರಣಗಳನ್ನು ತೊಟ್ಟಾಗ ಆಗುತ್ತದೆ.

ಪರಿಸರಸ್ನೇಹಿ ಧೋರಣೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳದ ಜೆನ್–ಜಿ ಆಭರಣಗಳಲ್ಲಿ ಸಾಮಾನ್ಯವಾಗಿ ಮರುಬಳಕೆ ಮಾಡಬಹುದಾದ ಲೋಹಗಳು, ಮಾನವ ನಿರ್ಮಿತ ಮುತ್ತುಗಳು ಮತ್ತು ವಜ್ರಗಳನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಇವು ಗಣಿಗಾರಿಕೆ ಮಾಡಿ ಹೊರತೆಗೆದ ಮುತ್ತು ವಜ್ರಗಳಷ್ಟೆ ಹೊಳೆಯುತ್ತಿರುತ್ತವೆ.

ಸರಳತೆ ಹಾಗೂ ಸೊಬಗಿನ 'ಇನ್‌ವಿಸಿಬಲ್' ನೆಕ್‌ಪೀಸ್‌ಗಳು ಉಡುಪಿನ ಗತ್ತಿಗೆ ಮೀರದಂತೆ ತಮ್ಮ ಇರುವಿಕೆಯನ್ನು ಸ್ಪಷ್ಟಪಡಿಸುತ್ತವೆ. 'ಮಿನಿಮಲಿಸ್ಟಿಕ್' ಶೈಲಿಯ ಉತ್ತಮ ಸರಪಳಿ ಮಾದರಿಯ ನೆಕ್‌ಪೀಸ್‌ಗಳು, ಸಣ್ಣ ಸಣ್ಣ ಸ್ಟಡ್‌ಗಳು, ಉಂಗುರಗಳನ್ನು ನೋಡಬಹುದು. ಕೆಲವೊಮ್ಮೆ ಸ್ಟಡ್‌ಗಳೇ ಉಂಗುರಗಳಾಗಿಯೂ ನೆಕ್‌ಪೀಸ್‌ಗಳೇ ಬಳೆಗಳಾಗಿಯೂ ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳುವಷ್ಟು ಹೊಸತನದಿಂದ ವಿನ್ಯಾಸ ಮಾಡಲಾಗಿರುತ್ತದೆ. ನೀಳವಾದ ಕತ್ತಿಗೆ 'ಲೇಯರ್ಡ್' ಕತ್ತಿನ ಸರಗಳು ಚೆನ್ನಾಗಿ ಕಾಣುತ್ತವೆ. ಇಂಥ ಸಮಯದಲ್ಲಿ ಸಾಧ್ಯವಾದಷ್ಟು ವಿ–ನೆಕ್ ಇರುವ ಕ್ರಾಪ್ ಟಾಪ್‌ಗಳನ್ನು ಧರಿಸುವುದು ಉತ್ತಮ.

ಲಿಂಗಭೇದಕ್ಕೆ ಆಸ್ಪದ ಕೊಡದ ಈ ಆಭರಣಗಳು. 'ಯುನಿಸೆಕ್ಸ್' ಪರಿಕಲ್ಪನೆಯಲ್ಲಿ ರೂಪುಗೊಂಡಿರುತ್ತವೆ. ಚೈನ್ ನೆಕ್ಲೇಸ್‌ಗಳು, ಹೂಪ್ ಕಿವಿಯೋಲೆಗಳು, ಸಿಗ್ನೆಟ್ ಉಂಗುರಗಳು ಈ ಪರಿಕಲ್ಪನೆಗೆ ಚಂದಗೆ ಹೊಂದುವ ವಿನ್ಯಾಸಗಳಾಗಿವೆ.

ತಾಂತ್ರಿಕವಾಗಿಯೂ ಕ್ರಿಯಾತ್ಮಕವೆನಿಸುವ ಕ್ರಿಯಾಶೀಲ ಆಭರಣಗಳನ್ನು ಜೆನ್–ಜಿ ಹೆಚ್ಚು ಇಷ್ಟಪಡುತ್ತದೆ. ಸ್ಮಾರ್ಟ್ ಉಂಗುರಗಳು, ಸ್ಮಾರ್ಟ್ ಬಳೆ ಹಾಗೂ ಕಿವಿಯೋಲೆಗಳು. ಇವು ತಾವಿರುವ ತಾಣವನ್ನು ಟ್ರ್ಯಾಕ್ ಮಾಡುವ, ಹಾರ್ಟ್‌ಬೀಟ್, ಬಿ.ಪಿ. ಸೇರಿದಂತೆ ಫಿಟ್‌ನೆಸ್ ಅನ್ನು ನಿಖರವಾಗಿ ಹೇಳುವ ಪರಿಕರವನ್ನು ಹೊಂದಿರುತ್ತದೆ. ಇಷ್ಟೇ ಅಲ್ಲದೆ ನಿತ್ಯ ಎಷ್ಟು ಹೆಜ್ಜೆ ನಡೆಯಲಾಯಿತು? ಎಷ್ಟು ಗಂಟೆ ನಿದ್ರೆ ಮಾಡಲಾಯಿತು ಎಂಬುದನ್ನು ನಿಖರವಾಗಿ ತಿಳಿಸುತ್ತವೆ. ಓಲೆಗಳು ವೈರ್‌ಲೆಸ್ ಹೆಡ್‌ಫೋನ್‌ನಂತೆಯೂ ಕೆಲಸ ಮಾಡುತ್ತವೆ.

ಜೆನ್–ಜಿಯ ಮತ್ತೊಂದು ವಿಶೇಷತೆಯೇನೆಂದರೆ ಧರಿಸುವ ಬಟ್ಟೆಗಷ್ಟೇ ಅಲ್ಲದೆ ಕೈಯಲ್ಲಿರುವ ಫೋನ್‌ಗೆ ಸರಿ ಹೊಂದುವ ಆಭರಣಗಳನ್ನು, ಉಂಗುರ, ಸರವನ್ನು ತೊಡುತ್ತಾರೆ. ಬೇರೆ ಬೇರೆ ಬ್ರ್ಯಾಂಡ್‌ನಡಿಯಲ್ಲಿ ಆಕರ್ಷಕ ಆಭರಣಗಳು ಮಾರುಕಟ್ಟೆಯಲ್ಲಿ ಮೋಡಿ ಮಾಡಿವೆ. ■

